# ಐದನೇ ಕಿಸಾನ್ ಸ್ವರಾಜ್ ಸಮ್ಮೇಳನದ ಘೋಷಣೆಗಳು

ಮೈಸೂರು, ೧೧-೧೩ ನವೆಂಬರ್ ೨೦೨೨ ಪರಿಸರ ಬದಲಾವಣೆಯ ಈ ದಿನಗಳಲ್ಲಿ ಆಹಾರ ಸಾರ್ವಭೌಮತ್ವ, ಪೌಷ್ಟಿಕಾಂಶ ಭದ್ರತೆ, ಪರಿಸರ ಸುಸ್ಥಿರತೆ ಮತ್ತು ರೈತರ ಸಬಲೀಕರಣ

೫ನೇ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚು ರೈತರು, ರೈತ ಮಹಿಳೆಯರು, ಯುವಜನರು, ಆದಿವಾಸಿ ರೈತರು, ಬೀಜ ಸಂರಕ್ಷಕರು, ಸಮುದಾಯ ಸಂಘಟಕರು, ವಿಜ್ಞಾನಿಗಳು, ನೀತಿ ನಿರೂಪಕರು, ಗ್ರಾಹಕರು ಮತ್ತು ವಿದ್ಯಾರ್ಥಿಗಳಲ್ಲದೇ ಇನ್ನೂ ಬೇರೆ ಮೂಲಗಳ ಜನರು ಭಾಗವಹಿಸಿದ್ದರು. ಬೇರೆ ಬೇರೆ ಸಂಘಟನಾ ಪ್ರಯತ್ನಗಳ ಫಲವಾಗಿ ಇಡೀ ದೇಶದ ಮೂಲೆ ಮೂಲೆಗಳಿಂದ ಹರಿದು ಬಂದ ಈ ಜನಸಾಗರ ನಮ್ಮ ಜಾಲವು ಅದೆಷ್ಟು ವಿಶಾಲವಾಗಿದೆ ಎಂಬುದನ್ನು ಪ್ರತಿನಿಧಿಸುವಂತಿತ್ತು. ಇಂದು ನಮ್ಮ ಆಶಯವು ಬಲಗೊಂಡಿದೆ. ಪರಿಸರಾತ್ಮಕ ಕೃಷಿಗೆ, ಮತ್ತು ಸುಸ್ಥಿರವಾದ ಕೃಷಿ ಜೀವನೋಪಾಯಗಳನ್ನು ಇನ್ನೂ ಬಲಪಡಿಸಬೇಕೆಂಬ ನಮ್ಮ ಬದ್ಧತೆಯು ಕಿಸಾನ್ ಸಮ್ಮೇಳನದ ಮುಕ್ತಾಯದ ಹೊತ್ತಿಗೆ ಇನ್ನೂ ಗಟ್ಟಿಯಾಗಿದೆ. ಪರಸ್ಪರ ಭೇಟಿ, ಕಲಿಕೆ ಮತ್ತು ಚರ್ಚೆಗಳಿಂದ ನಮ್ಮ ಸಂಪರ್ಕ ಮತ್ತು ಕಲಿಕೆಗಳು ಇನ್ನೂ ಉತ್ತಮವಾಗಿದೆ. ದೇಶದ ರಾಜಕೀಯದಲ್ಲಿ ತಮ್ಮ ಧ್ವನಿಯನ್ನು ಗಟ್ಟಿಗೊಳಿಸಿದ ಐತಿಹಾಸಿಕ ರೈತ ಆಂದೋಲನದ ಹಿನ್ನೆಲೆಯಲ್ಲಿ ಈ ಸಮ್ಮೇಳನವು ನಡೆದಿದೆ.

ಸಮ್ಮೇಳನದ ಮುಖ್ಯ ವಿಚಾರಧಾರೆಯು ವಾತಾವರಣ ಬದಲಾವಣೆ ಮತ್ತು ಅದು ಕೃಷಿ, ಆಹಾರ ಮತ್ತು ಕೃಷಿಕರ ಜೀವನೋಪಾಯಗಳ ಮೇಲೆ ತಂದೊಡ್ಡಿರುವ ಅಪಾಯಗಳ ಮೇಲೆಯೇ ಇತ್ತು. ಇದರ ಜೊತೆಗೆ ಇನ್ನೂ ಹತ್ತು ಹಲವಾರು ಸಮಸ್ಯೆಗಳು ಚರ್ಚೆಗೊಳಪಟ್ಟವು. ರೈತರ ಭೂಮಿಯನ್ನು, ಬೀಜಗಳನ್ನು, ಮಾರುಕಟ್ಟೆಯನ್ನು ಮತ್ತು ಸರಕಾರದ ಬೆಂಬಲಗಳನ್ನು ಕಿತ್ತುಕೊಳ್ಳಲು ದೊಡ್ಡ ಶಕ್ತಿಗಳು ಸತತವಾಗಿ ಕೆಲಸ ಮಾಡುತ್ತಿವೆ.ರೈತರಿಂದ ಇವನ್ನೆಲ್ಲ ಕಿತ್ತು, ಅಸ್ಥಿರವಾದ, ಕೈಗಾರೀಕೃತ ಕಾರ್ಪೋರೇಟ್ ಕಂಪನಿಗಳ ನಿಯಂತ್ರಣಕ್ಕೊಳಪಟ್ಟ ಕೃಷಿಯತ್ತ ಎಲ್ಲವನ್ನೂ ಕೊಂಡೊಯ್ಯುತ್ತಿದೆ. ಅದೂ ಆರ್ಟಿಫಿಷಿಯಲ್ ಇಂಟಲಿಜೆನ್ಸ್ ನಿಂದ ನಿಯಂತ್ರಣಕ್ಕೊಳಪಟ್ಟಿದ್ದು. ಗುತ್ತಿಗೆ ಕೃಷಿಯು ಹೆಚ್ಚುತ್ತಿರುವುದು, ಆದಿವಾಸಿಗಳನ್ನು ಭೂಮಿಹೀನರನ್ನಾಗಿ ಮಾಡುತ್ತಿರುವುದು ಇವೆಲ್ಲ ಮಹಿಳೆಯರನ್ನೂ ಮತ್ತು ಬುಡಕಟ್ಟು ಜನರನ್ನೂ ಕೃಷಿಯಿಂದ ಹೊರಗೆ ತಳ್ಳುತ್ತಿರುವುದು ಎದ್ದುಕಾಣುತ್ತಿದೆ.

ಇವೆಲ್ಲ ಸವಾಲುಗಳು ನಮ್ಮೆಲ್ಲರ ಸಂಘಟನಾತ್ಮಕ ಜವಾಬ್ದಾರಿ ಎಂಬುದನ್ನು ಒಪ್ಪಿಕೊಂಡು ತಮ್ಮ ಕಾರ್ಯಾನುಭವದ ಹಿನ್ನೆಲೆಯಲ್ಲಿ ಇವೆಲ್ಲ ಸಮಸ್ಯೆಗಳಿಗೆ ಸ್ಪಷ್ಟವಾದ ಸಲಹೆಗಳನ್ನು ನಮ್ಮ ಕಾರ್ಯಕ್ರಮ ಸಂಯೋಜಕರು ಒಟ್ಟಿಗೆ ತಂದಿದ್ದಾರೆ.ನಮ್ಮ ಈ ಸಲಹೆಗಳನ್ನು ನಾವು ಎತ್ತಿ ಹಿಡಿಯುತ್ತೇವಲ್ಲದೇ ಇವುಗಳತ್ತ ನಮ್ಮ ಬದ್ಧತೆಯನ್ನು ಈ ಮೂಲಕ ಮತ್ತೊಮ್ಮೆ ಸ್ಪಷ್ಟಪಡಿಸುತ್ತೇವೆ.

**ಎಲ್ಲರನ್ನೂ ಒಳಗೊಳ್ಳುವ ಪರಿಸರಾತ್ಮಕ ಕೃಷಿ;** ಪರಿಸರಾತ್ಮಕ ಕೃಷಿಯಲ್ಲಿ ಇಂದು ಭಾರತದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಪದ್ಧತಿಗಳನ್ನೂ ಒಳಗೊಳ್ಳುವಂತಿರಬೇಕು. ನಮ್ಮ ಆಹಾರವು ಬೇರೆ ಬೇಏ ಹೆಸರುಗಳಿಂದ ಕರೆಯಲ್ಪಡುವ ಎಲ್ಲಾ ಮೂಲಗಳಿಂದ ಬಂದಿದ್ದಿರಬೇಕು. ಪರಿಸರಾತ್ಮಕ ಕೃಷಿಯು ಕೃಷಿಯಲ್ಲಿ ತೆಗೆದುಕೊಳ್ಳಬಹುದಾದ ಒಂದು ಪದ್ಧತಿ ಮಾತ್ರವಾಗಿರದೆ ವಾತಾವರಣ ಬದಲಾಗುತ್ತಿರುವ ಈ ದಿನಗಳಲ್ಲಿ ನಮ್ಮ ಕೃಷಿಯನ್ನು ಪುನಶ್ಚೇತನಗೊಳಿಸುವ ಮೂಲ

---

This is a Discussion Note created for the 5th Kisan Swaraj Sammelan in Mysuru during Nov.11-13, 2022. For any queries, or more information, you can write to asha.kisanswaraj@gmail.com

ಧಾತುವಾಗಬೇಕು. ಬದಲಾಗುತ್ತಿರುವ ವಾತಾವರಣದ ಸವಾಲಿಗೆ ಉತ್ತರವಾಗಿಯೂ ಮತ್ತು ಅದಕ್ಕೆ ತೆಗೆದುಕೊಳ್ಳಬೇಕಾದ ಪರಿಹಾರೋಪಾಯವಾಗಿಯೂ ಪರಿಸರಾತ್ಮಕ ಕೃಷಿಯನ್ನು ನಾವು ನೋಡುತ್ತೇವೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಪರಿಸರಾತ್ಮಕ ಕೃಷಿಯ ನಿಟ್ಟಿನಲ್ಲಿ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ನಾವು ಗುರುತಿಸುತ್ತೇವೆ. ಪರಿಸರಾತ್ಮಕ ಕೃಷಿಯನ್ನು ಬೇರು ಮೂಲದಿಂದ ಮೇಲೆತ್ತಲು ಸರಕಾರದ ಪ್ರಯತ್ನಗಳು ಮತ್ತು ಜನರ ಪ್ರಯತ್ನಗಳು ಒಟ್ಟಿಗೆ ಬರುವ ಒಂದು ಮಹತ್ವದ ಐತಿಹಾಸಿಕ ಅವಕಾಶ ಇದಾಗಿದೆ ಎಂಬುದನ್ನು ನಾವು ಗುರುತಿಸುತ್ತೇವೆ. ಪರಿಸರಾತ್ಮಕ ಕೃಷಿಗೆ ಅವಶ್ಯವಿರುವ ವಿಜ್ಞಾನ ತಂತ್ರಜ್ಞಾನಗಳ ಜೊತೆಗೆ ನಾವಿದ್ದೇವೆ ಎಂಬುದನ್ನು ಸರಕಾರಕ್ಕೆ ನಾವು ಹೇಳಬಯಸುತ್ತೇವೆ. ರೈತರನ್ನು ಸಬಲಗೊಳಿಸುವ ಮತ್ತು ಸೃಜನಶೀಲತೆಯನ್ನು ಬೆಳೆಸುವುದು ಸಂಸ್ಥೆಗಳನ್ನು ಕಟ್ಟುವ ಮೂಲದ್ರವ್ಯವಾಗಬೇಕು. ಅಂತಹ ಪ್ರಯತ್ನಗಳನ್ನು ಮುಂದಕ್ಕೊಯ್ಯಲು ಸರಿಯಾದ, ಪರಿಣಿತ ರೈತ ವಿಜ್ಞಾನಿಗಳನ್ನು ಅದರಲ್ಲೂ ಮಹಿಳೆಯರನ್ನು ನೇಮಿಸಿಕೊಳ್ಳಬೇಕು.

**ರೈತರ ಸಾರ್ವಭೌಮತೆಯನ್ನು ಮುಂದಕ್ಕೊಯ್ಯುವ ಪ್ರಯತ್ನಗಳು**: ರೈತರ ಸ್ವಾವಲಂಬನೆಯನ್ನು ಸತತವಾಗಿ ಕಡಿತಗೊಳಿಸುವ ಅನೇಕವಿಷಯಗಳಿವೆ ಎಂಬುದನ್ನು ನಾವು ಗುರುತಿಸುತ್ತೇವೆ. ಭೂಮಿ, ಬೀಜಗಳು, ಅರಣ್ಯ, ನೀರು ಇವುಗಳ ಮೇಲಿನ ಕಾನೂನಾತ್ಮಕ ಹಕ್ಕುಗಳು ಕಡಿಮೆಯಾಗುತ್ತ, ಒಳಸುರಿ, ಬಂಡವಾಳ ಮತ್ತು ಮಾರಾಟಕ್ಕಾಗಿ ಮಾರುಕಟ್ಟೆಯ ಮೇಲೆ ರೈತರ ಅವಲಂಬನೆಯನ್ನು ಹೆಚ್ಚಿಸುವ ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದಗಳು, ಹೊಸ ಹೊಸ ತಂತ್ರಜ್ಞಾನ ಮತ್ತು ಡಾಟಾಗಳ ಪ್ರಭುತ್ವ. ರೈತರ ಸ್ವಾತಂತ್ರ್ಯ, ಸ್ವಾಭಿಮಾನ, ಮತ್ತು ರೈತರ ಸಾರ್ವಭೌಮತೆಯನ್ನು ಎಲ್ಲಾ ರಂಗಗಳಲ್ಲೂ ಹೆಚ್ಚಿಸುವ ಪ್ರಯತ್ನ ನಮ್ಮದು. ಇಂದಿನ ಡಿಜಿಟಲ್ ಕೃಷಿಯಲ್ಲೂ ಕೂಡ ರೈತ ಕೇಂದ್ರಿತ ಆಡಳಿತ, ರೈತರಿಗೆ ಅವಶ್ಯವಿರುವ ಯಾವುದೇ ನೀತಿ ನಿರೂಪಣೆಯಲ್ಲೂ ಅವರ ಸಂಪೂರ್ಣ ಮಾಹಿತಿಯುಳ್ಳ ಒಪ್ಪಿಗೆ ಇದ್ದಾಗಲೇ ಮುಂದುವರೆಯುವಂತಹ ಗಟ್ಟಿಮುಟ್ಟಾದ ಕಾನೂನುಗಳಾಗಬೇಕು.

**ಹೊಲಗಳಲ್ಲಿ ಕೆಲಸ ಮಾಡುವ ನಿಜ ರೈತರನ್ನು ಗುರುತಿಸುವುದು**: ನಮ್ಮ ಆಹಾರವನ್ನು ಉತ್ಪಾದಿಸುವುದು ಮುಖ್ಯವಾಗಿ ಮಹಿಳೆಯರೇ ಆಗಿದ್ದರೂ ಕೂಡ, ಅವರ ಹೆಸರಲ್ಲಿ ಭೂಮಿ ಇಲ್ಲದ ಕಾರಣ ಮತ್ತು ನಮ್ಮ ಪಿತೃಪ್ರಧಾನ ಮೌಲ್ಯದಿಂದಾಗಿ ನಾವು ಮಹಿಳೆಯರನ್ನು ರೈತರಾಗಿ ಗುರುತಿಸುತ್ತಿಲ್ಲ. ಅದೇ ರೀತಿಯಲ್ಲಿ ಗುತ್ತಿಗೆ ಕೃಷಿಕರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿರುವುದರಿಂದ ಅವರನ್ನು ಗುರುತಿಸುವ ಮತ್ತು ಕಾನೂನಾತ್ಮಕವಾಗಿ ಬೆಂಬಲಿಸುವ ಅಗತ್ಯವಿದೆ. ಕೃಷಿಯನ್ನೇ ಮಾಡದ ರೈತರ ಸಂಖ್ಯೆಯೂ ಹೆಚ್ಚುತ್ತಿದೆ. ಆದರೆ ಅವರಿಗೆ ರೈತರ ಸ್ಥಾನಮಾನ ಸಿಗುತ್ತಿದೆ. ಐತಿಹಾಸಿಕವಾಗಿ ಮೂಲೆಗೆ ತಳ್ಳಲ್ಪಟ್ಟ ಜನರನ್ನು ಭೂಮಿ ಒಡೆತನದಿಂದ ಹೊರಗೇ ಇರಿಸಲಾಗಿದ್ದು ಅವರೆಲ್ಲ ಇಂದು ಕೃಷಿ ಕೂಲಿಕಾರರಾಗಿದ್ದಾರೆ. ಈ ಎಲ್ಲ ರೈತರನ್ನೂ ನಾವು ಗುರುತಿಸುವಂತಾಗಬೇಕು. ಅವರಿಗೆ ಭೂಮಿ ಸಿಗುವಂತಾಗಬೇಕು. ಕೃಷಿ ಭೂಮಿಯೇ ವಿರಳವಾಗುತ್ತಿರುವಾಗ ಭೂಮಿಯನ್ನು ಲಾಭಕ್ಕಾಗಿ ಬೇರೆ ಬೇರೆ ಉದ್ದೇಶಗಳಿಗೆ ಮಾರಾಟಾವಾಗುವುದು ನಿಲ್ಲಬೇಕು.

**ಎಲ್ಲಾ ರೈತರಿಗೆ ಗಳಿಕೆ ಖಾತರಿ**: ಕೃಷಿಯಲ್ಲಿನ ಬಿಕ್ಕಟ್ಟುಗಳು ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವುದಕ್ಕೆ ಕಾರಣವಾಗಿದೆ. ಎಲ್ಲಾ ಬೆಳೆಗಳಿಗೂ ಕನಿಷ್ಟ ಬೆಂಬಲ ಬೆಲೆ, ಬೆಳೆಹಾನಿಗೆ ಯೋಗ್ಯ ಪರಿಹಾರ, ಬೆಳೆಗಳಿಗೆ ವಿಮೆ, ರೈತರ

---

ಗುಂಪುಗಳಲ್ಲಿ ಬಂಡವಾಳ ಹಾಕುವುದು ಮತ್ತು ಸಾಮಾಜಿಕ ಭದ್ರತೆಯಂತಹ ಬೆಂಬಲವು ರೈತರಿಗೂ ಘನತೆಯಿಂದ ಬದುಕುವಂತಹ ಸಾಧ್ಯತೆಯನ್ನು ಕಲ್ಪಿಸಿಕೊಡುತ್ತದೆ.

**ಕೃಷಿ ವೈವಿಧ್ಯತೆ ಮತ್ತು ಬೀಜ ಸ್ವಾವಲಂಬನೆಗಳನ್ನು ಪುನಶ್ಚೇತನಗೊಳಿಸುವುದು**: ವಾತಾವರಣ ಬದಲಾವಣೆಗೆ ನಮ್ಮಲ್ಲಿರುವ ಕೃಷಿ ವೈವಿಧ್ಯವೇ ಅತ್ಯುತ್ತಮ ಪರಿಹಾರ.ಈ ಕಾರಣಕ್ಕಾಗಿಯೇ ಬೀಜಗಳು ನಮ್ಮ ರೈತರ ಕೈಯಲ್ಲೇ ಇದ್ದು ಪರಸ್ಪರ ಹಂಚಿಕೆಯಾಗುತ್ತಿರಬೇಕು. ಕಾರ್ಪೋರೇಟ್ ಕಂಪನಿಗಳ ಹಿಡಿತ ಮತ್ತು ಬೀಜಬೌದ್ಧಿಕ ಸ್ವಾಮ್ಯ ಕಾನೂನುಗಳ ಹಿಡಿತಕ್ಕೊಳಗಾಗಬಾರದು. ಗ್ರಾಹಕರೂ ಕೂಡ ಮುಂದೆ ಬಂದು ತಮಗಾಗಿಯೂ ಮತ್ತು ಮುಂದಿನ ಪೀಳಿಗೆಗಾಗಿಯೂ ಕೃಷಿ ವೈವಿಧ್ಯವನ್ನು ಪುನಶ್ಚೇತನಗೊಳಿಸುವ ದಿಕ್ಕಿನಲ್ಲಿ ಖರೀದಿಯನ್ನು ಮಾಡಬೇಕು. ಅಂತಹ ಪ್ರಯತ್ನವನ್ನು ಯಾವುದೇ ರಾಜ್ಯ ಸರಕಾರಗಳು ಮಾಡುತ್ತಿದ್ದಲ್ಲಿ ಕೇಂದ್ರ ಸರಕಾರವು ಕೂಡ ಅದನ್ನು ಅನುಸರಿಸಬೇಕು.

**ಎಲ್ಲರಿಗೂ ಸುರಕ್ಷಿತ,ವೈವಿಧ್ಯಮಯ, ಸಮಗ್ರ ಆಹಾರ**:ನಮ ಎಲ್ಲಾ ನಾಗರಿಕರಿಗೂ ಸುರಕ್ಷಿತವಾದ, ಪೌಷ್ಟಿಕವಾದ ಮತ್ತು ಅವರ ಸಂಸ್ಕೃತಿಗೆ ಒಪ್ಪುವಂತಹ ವೈವಿಧ್ಯಮಯವಾದ ಆಹಾರದ ಹಕ್ಕು ಇದೆ. ಊಟದ ತಟ್ಟೆಯಲ್ಲಿ ವೈವಿಧ್ಯ ಮತ್ತು ಪೌಷ್ಟಿಕ ಆಹಾರ ಬರಬೇಕೆಂದರೆ ರೈತರ ಹೊಲದಲ್ಲಿ ಅದು ಇರಬೇಕು. ಮತ್ತು ನಮ್ಮ ಮಣ್ಣು ಅವನ್ನು ಪೋಷಿಸುವಂತಿರಬೇಕು. ಇಂದು ಸರಕಾರಗಳು ಆಹಾರದಲ್ಲಿ ಪೌಷ್ಟಿಕಾಂಶವನ್ನು ಸೇರಿಸುವ ವಂಶವಾಹಿ ಪ್ರಯೋಗಗಳತ್ತ ಮುಖ ಮಾಡಿವೆ. ಆದರೆ ಎಲ್ಲಾ ತಲೆಗಳಿಗೂ ಒಂದೇ ಟೊಪ್ಪಿಗೆ ಎನ್ನುವ ಇಂಥಹ ಯೋಜನೆಗಳು ನಮ್ಮ ಆಹಾರ ವೈವಿಧ್ಯತೆಯನ್ನು ಸಂಪೂರ್ಣ ನಾಶ ಮಾಡುತ್ತವೆ. ಹಾಗೆಯೇ ಸಮುದಾಯಗಳಿಗೆ ಏನನ್ನು ತಿನ್ನಬೇಕು ಎಂದು ಆಜ್ಞೆ ಮಾಡುವುದು ನಮ್ಮ ಸಂವಿಧಾನಕ್ಕೆ ವಿರುದ್ಧ. ಪೌಷ್ಟಿಕಾಂಶ ಭದ್ರತೆ ಎಂಬುದು ಸ್ಥಳೀಯ ಜನರಿಂದ, ಸ್ಥಳೀಯ ಆಹಾರ ವೈವಿಧ್ಯವನ್ನು ಪೋಷಿಸುವ ಪರಿಸರಾತ್ಮಕ ಕೃಷಿ ಮತ್ತು ವೈವಿಧ್ಯಮಯ ಕೃಷಿಯ ಮೂಲಕ ಬರಬೇಕು. ಅರಣ್ಯ ಜನ್ಯ ಮತ್ತು ಪ್ರಾಣಿಜನ್ಯ ಆಹಾರಗಳೂ ಇದರಲ್ಲಿರಬೇಕು. ಪೌಷ್ಟಿಕಾಂಶ ಭದ್ರತೆಯು ಕಾನೂನಾತ್ಮಕವಾಗಿ ಸಾರ್ವತ್ರಿಕವಾಗಿ ಸಿಗಬೇಕು.

**ಭಾರತದ ಆಹಾರ ಪದ್ಧತಿಯನ್ನು ಅನವಶ್ಯಕ, ಬೇಕಾಗಿಲ್ಲದ, ಅಸುರಕ್ಷಿತ ವಂಶವಾಹಿ ತಂತ್ರಜ್ಞಾನಗಳಿಂದ ಹೊರಗಿಡುವುದು**:ನಮ್ಮ ಜೀವ ವೈವಿಧ್ಯವನ್ನು ನಾಶ ಮಾಡುವ ವಂಶವಾಹಿ ತಂತ್ರಜ್ಞಾನಕ್ಕೆ ನಮ್ಮ ಕೃಷಿಯಲ್ಲಿ ಸ್ಥಾನವಿಲ್ಲ. ವಂಶವಾಹಿಗಳಲ್ಲಿ ಬದಲಾವಣೆ ಮಾಡುವುದು ಕೂಡ ಕುಲಾಂತರಿ ತಂತ್ರಜ್ಞಾನ. ಕಳೆನಾಶಕ ಪ್ರತಿರೋಧಿ ಸಾಸಿವೆಯನ್ನು ನಮ್ಮ ಹೊಲಗಳಲ್ಲಿ ಪರಿಚಯಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿರುವುದನ್ನು ಈ ಸಮಾವೇಶವು ಅತ್ಯಂತ ಆತಂಕ ಮತ್ತು ಭಯದಿಂದ ನೋಡುತ್ತದೆ. ಅದು ಸುರಕ್ಷಿತ ಮತ್ತು ಹೆಚ್ಚು ಇಳುವರಿ ಕೊಡುವಂಥಾದ್ದೆನ್ನುವ ಮಾತುಗಳೆಲ್ಲ ಅವೈಜ್ಞಾನಿಕ ಎಂಬುದು ನಮಗೆ ಗೊತ್ತು. ಇಡೀ ಕೃಷಿವಲಯವನ್ನು ಮತ್ತು ಆ ಮೂಲಕ ಆಹಾರ ಉದ್ದಿಮೆಯನ್ನು ಸಂಪೂರ್ಣ ನಿಯಂತ್ರಣಕ್ಕೊಳಪಡಿಸುವ ಕುತಂತ್ರವಿದೆಂಬ ಅರಿವು ನಮಗಿದೆ. ನಮ್ಮ ಸರಕಾರವು ವಿಜ್ಞಾನಕ್ಕೆ ಬದ್ಧವಾಗಿಯೂ ಮತ್ತು ಸಮಾಜಕ್ಕೂ ಬದ್ಧವಾಗಿ ಇರಬೇಕೆಂದು ಈ ಮೂಲಕ ನಾವು ಸರಕಾರಕ್ಕೆ ಒತ್ತಾಯಿಸುತ್ತ ಈ ಕಾನೂನನ್ನು ಕೂಡಲೇ ಹಿಂಪಡೆಯಬೇಕೆಂದು ಒತ್ತಾಯಿಸುತ್ತೇವೆ.

---

ವ್ಯಾಪಾರ ಯಃ ಸ್ವತಂತ್ರ ವ್ಯಾಪಾರವೆನ್ನುವುದು ದೊಡ್ಡ ಪ್ರಮಾಣದ ಸಬ್ಸಿಡಿ ಪಡೆದು ಕೃಷಿ ಉದ್ದಿಮೆಗಳು ಆಹಾರ ವಸ್ತುಗಳನ್ನು ಕಡಿಮೆ ದರದಲ್ಲಿ ತಂದು ಬಿಸಾಕುವ ನೀತಿಗಳಿಂದಾಗಿ, ಕೃಷಿಕರ ಜೀವನದಲ್ಲಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದೆ. ಸ್ವತಂತ್ರ ವ್ಯಾಪಾರವು ನಮ್ಮ ಆಹಾರ ಸಾರ್ವಭೌಮತ್ವಕ್ಕೆ ಬಲು ದೊಡ್ಡ ಅಪಾಯ ತಂದೊಡ್ಡಿದೆ. ಅದು ನ್ಯಾಯಯುತ ವ್ಯಾಪಾರ ಒಪ್ಪಂದವಾಗಬೇಕು. ಸ್ಥಳೀಯ ರೈತರನ್ನು, ವೈವಿಧ್ಯಮಯ ಕೃಷಿಯನ್ನು, ಪರಿಸರಾತ್ಮಕ ಕೃಷಿಯನ್ನು ಕೊಲ್ಲುವಂತಿರಬಾರದು. ಅಂತಾರಾಷ್ಟ್ರೀಯ ಅನೇಕ ಒಪ್ಪಂದಗಳನ್ನು ಅದು ಮುರಿದು ಹಾಕಬಾರದು. ವಾತಾವರಣ ಬದಲಾವಣೆ ಮತ್ತು ಜಾಗತಿಕ ಮಹಾಮಾರಿ ಹಾದುಹೋದ ಈ ದಿನಗಳನ್ನಂತೂ ಆಹಾರ ವ್ಯವಸ್ಥೆಯನ್ನು ಸುಸ್ಥಿರ ತಂತ್ರಜ್ಞಾನಗಳ ಮೂಲಕ ಬೆಳೆಸುವುದು ಅತಿ ಅವಶ್ಯವಾಗಿದೆ.

**ಗ್ರಾಮೀಣ ರೈತರು ಮತ್ತು ಶಹರದ ಗ್ರಾಹಕರ ಮಧ್ಯೆ ಬಲಗೊಳ್ಳಬೇಕಾದ ಸಂಬಂಧ**ಃ ನಮ್ಮ ಶಹರದ ಗ್ರಾಹಕರಲ್ಲಿ ಬಹುಜನರು ನಮಗೆ ನಿತ್ಯ ಅನ್ನ ನೀಡುತ್ತಿರುವ ರೈತರ ಕತೆ ಏನಾಗಿದೆ, ಗ್ರಾಮೀಣ ಬದುಕು ಹೇಗೆ ನಾಶವಾಗುತ್ತಿದೆ ಎಂಬುದರ ಬಗ್ಗೆ ಚಿಂತೆಯೆ ಇಲ್ಲದವರಾಗಿದ್ದಾರೆ. ದುರ್ಬಲಗೊಂಡಿರುವ ಈ ಸಂಬಂಧವನ್ನು ಪುನಶ್ಚೇತನಗೊಳಿಸಬೇಕಾಗಿರುವುದು ಇಂದಿನ ಬಲುದೊಡ್ಡ ಅವಶ್ಯಕತೆಯಾಗಿದೆ.

ನಾವು ಇಂದು ನಮ್ಮನ್ನೇ ನಾವು ಜಾಗೃತಗೊಳಿಸುವುದು,ನಮ್ಮ ಸಮುದಾಯಗಳನ್ನು ಎಚ್ಚರಿಸುವುದು,ನಮ್ಮ ಸರಕಾರಗಳನ್ನು ಬದ್ಧರನ್ನಾಗಿ ಮಾಡುವುದು, ನಾಗರಿಕರಲ್ಲಿ ನಮ್ಮ ಆಹಾರ ವೈವಿಧ್ಯವನ್ನು ಕಾಪಾಡುವುದರ ಬಗ್ಗೆ ಅರಿವು ಮೂಡಿಸುವುದು ಮತ್ತು ನಾವೆಲ್ಲೇ ಇದ್ದರೂ ಅಲ್ಲಿಂದ ಪ್ರಜಾಸತ್ತಾತ್ಮಕವಾಗಿ ಮತ್ತು ಶಾಂತಿಯುತವಾಗಿ ಬದಲಾವಣೆಗಾಗಿ ಒತ್ತಾಯಿಸುವುದು ಇವನ್ನು ಮಾಡುತ್ತೇವೆಂದು ಈ ಮೂಲಕ ಇಂದು ಘೋಷಿಸುತ್ತೇವೆ. ಇದು ಕಿಸಾನ್ ಸ್ವರಾಜ್ಯಕ್ಕಾಗಿ ನಮ್ಮ ಸತ್ಯಾಗ್ರಹ.

ನಾವಿಂದು ಈ ಸಮ್ಮೇಳನವನ್ನು ಆಯೋಜಿಸಿದ್ದಕ್ಕಾಗಿ ಕರ್ನಾಟಕದ ಸಂಸ್ಥೆಗಳು ಮತ್ತು ಜನರ ಔದಾರ್ಯವನ್ನು ಸ್ಮರಿಸಿ ಧನ್ಯವಾದಗಳನ್ನು ಹೇಳುತ್ತೇವೆ.